**Signature and Name of Invigilator**

1. (Signature) ______________________

   (Name) ______________________

2. (Signature) ______________________

   (Name) ______________________

**OMR Sheet No. :** ..............................................

(To be filled by the Candidate)

**Roll No.** | | | | | | | | |

(In figures as per admission card)

**Roll No.** ______________________

(In words)

**Test Booklet No.**

**J—2109**

**PAPER—II**

# KANNADA

**Time : 1¼ hours]** **[Maximum Marks : 100**

Number of Pages in this Booklet : **16** Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the question booklet will be replaced nor any extra time will be given.**
   (iii) After this verification is over, the Test Booklet Number should be entered in the OMR Sheet and the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.

   **Example :** (A) (B) ● (D)

   where (C) is the correct response.
5. Your responses to the items are to be indicated in the Answer Sheet given **inside the Paper I booklet only**. If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your name or put any mark on any part of the test booklet, except for the space allotted for the relevant entries, which may disclose your identity, you will render yourself liable to disqualification.
9. You have to return the test question booklet and OMR Answer Sheet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is NO negative marking.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए।
2. इस प्रश्न-पत्र में पचास बहुविकल्पीय प्रश्न हैं।
3. परीक्षा प्रारम्भ होने पर, प्रश्न-पुस्तिका आपको दे दी जायेगी। पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें। खुली हुई या बिना स्टीकर-सील की पुस्तिका स्वीकार न करें।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं। दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें। इसके लिए आपको पाँच मिनट दिये जायेंगे। उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा।**
   (iii) इस जाँच के बाद प्रश्न-पुस्तिका की क्रम संख्या OMR पत्रक पर अंकित करें और OMR पत्रक की क्रम संख्या इस प्रश्न-पुस्तिका पर अंकित कर दें।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं। आपको सही उत्तर के दीर्घवृत्त को पेन से भरकर काला करना है जैसा कि नीचे दिखाया गया है।

   **उदाहरण :** (A) (B) ● (D)

   जबकि (C) सही उत्तर है।
5. प्रश्नों के उत्तर **केवल प्रश्न पत्र I के अन्दर दिये गये** उत्तर-पत्रक पर ही अंकित करने हैं। यदि आप उत्तर पत्रक पर दिये गये दीर्घवृत्त के अलावा किसी अन्य स्थान पर उत्तर चिन्हांकित करते है, तो उसका मूल्यांकन नहीं होगा।
6. अन्दर दिये गये निर्देशों को ध्यानपूर्वक पढ़ें।
7. कच्चा काम (Rough Work) इस पुस्तिका के अन्तिम पृष्ठ पर करें।
8. यदि आप उत्तर-पुस्तिका पर अपना नाम या ऐसा कोई भी निशान जिससे आपकी पहचान हो सके, किसी भी भाग पर दर्शाते या अंकित करते हैं तो परीक्षा के लिये अयोग्य घोषित कर दिये जायेंगे।
9. आपको परीक्षा समाप्त होने पर प्रश्न-पुस्तिका एवं OMR उत्तर-पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें।
10. **केवल नीले/काले बाल प्वाईंट पैन का ही इस्तेमाल करें।**
11. **किसी भी प्रकार का संगणक ( कैलकुलेटर ) या लाग टेबल आदि का प्रयोग वर्जित है।**
12. **गलत उत्तर के लिए अंक नहीं काटे जायेंगे।**

# KANNADA

## ಕನ್ನಡ

## PAPER – II

## ಪತ್ರಿಕೆ – II

**Note :** This paper contains **fifty** (50) objective-type questions, each question carrying **two** (2) marks. Attempt **all** of them.

**ಸೂಚನೆ:** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ ಐವತ್ತು (೫೦) ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ ಎರಡು (೨) ಅಂಕಗಳು ಇರುತ್ತವೆ. ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ.

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

1. ಕನ್ನಡ, ತೆಲುಗು, ಸಂಸ್ಕೃತ ಭಾಷೆ ಬಳಕೆಯಾಗಿರುವ ಶಾಸನ :
   (A) ತಮ್ಮಟಕಲ್ಲು ಶಾಸನ (B) ಹಲ್ಮಿಡಿ ಶಾಸನ
   (C) ಗಂಗಾಧರಂ ಶಾಸನ (D) ಬಾದಾಮಿ ಶಾಸನ

2. ಇದು ಒಂದು ಗದ್ಯಗ್ರಂಥ :
   (A) ಧರ್ಮಾಮೃತ (B) ಚಾವುಂಡರಾಯ ಪುರಾಣ
   (C) ಪಂಚತಂತ್ರ (D) ಯಶೋಧರ ಚರಿತೆ

3. 'ಬೆಲೆಯಿಂದಕ್ಕುಮೆ ಕೃತಿ ಗಾವಿಲ ? ಭುವನದ ಭಾಗ್ಯದಿಂದ ಮಕ್ಕುಂ' ಎಂಬ ವಾಕ್ಯವನ್ನು ಪ್ರಯೋಗಿಸಿದ ಕವಿ :
   (A) ರನ್ನ (B) ಆಂಡಯ್ಯ
   (C) ಭೀಮ (D) ನೇಮಿಚಂದ್ರ

4. ನರಸಿಂಹಬಲ್ಲಾಳನ ಆಸ್ಥಾನದಲ್ಲಿದ್ದ ಕವಿ :
   (A) ರನ್ನ (B) ಲಕ್ಷ್ಮೀಶ
   (C) ಜನ್ನ (D) ಪೊನ್ನ

5. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಗೌರವಕ್ಕೆ ಪಾತ್ರನಾದ ಕವಿ :
   (A) ಲಕ್ಕಣದಂಡೇಶ (B) ಕುಮಾರವ್ಯಾಸ
   (C) ಚಾಮರಸ (D) ಲಕ್ಷ್ಮೀಶ

6. ಪ್ರಾಕೃತ ಕೃತಿಯ ಮೂಲ ಆಕರವಾಗಿರುವ ಗ್ರಂಥ :
   (A) ವಡ್ಡಾರಾಧನೆ (B) ವಿಕ್ರಮಾರ್ಜುನ ವಿಜಯ
   (C) ಅದ್ಭುತರಾಮಯಣಂ (D) ಮಿತ್ರವಿಂದಾಗೋವಿಂದ

7. 'ಅಪರಾಜಿತೇಶ್ವರ ಶತಕ' ಕೃತಿಯನ್ನು ಬರೆದ ಕವಿ :

(A) ವಿಜಯದಾಸ (B) ಹರಿಹರ

(C) ನಿಜಗುಣಶಿವಯೋಗಿ (D) ರತ್ನಾಕರವರ್ಣಿ

8. 'ಅನುಭವಸಾರ' ಕೃತಿಯನ್ನು ಬರೆದ ಕವಿ :

(A) ನಿಜಗುಣಶಿವಯೋಗಿ (B) ಮಲ್ಲಣಾಯಕ

(C) ಸರ್ವಜ್ಞ (D) ಮುಪ್ಪಿನಷಡಕ್ಷರಿ

9. ಸಂಚಿಯ ಹೊನ್ನಮ್ಮನ ಕೃತಿ :

(A) ಕರಣ ಹಸುಗೆ (B) ಯೋಗಾಂಗ ತ್ರಿವಿಧಿ

(C) ರತ್ನಾವತಿ ಕಲ್ಯಾಣ (D) ಹದಿಬದೆಯ ಧರ್ಮ

10. 'ರಾಮನಾಥ ಚರಿತೆ' ಕಾವ್ಯದ ನಾಯಕ ಯಾರು :

(A) ಸಿದ್ಧರಾಮ (B) ಕುಮಾರರಾಮ

(C) ರಾಮನಾಥ (D) ಭುವನೈಕ ರಾಮ

11. 'ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್' ಕೃತಿಯ ರಚಕ

(A) ಮೋಗ್ಲಿಂಗ್ (B) ಇ.ಪಿ. ರೈಸ್

(C) ಬಿ.ಎಲ್. ರೈಸ್ (D) ಕಿಟೆಲ್

12. ಷೇಕ್ಸ್‌ಪಿಯರನ ನಾಟಕಗಳನ್ನು ಕನ್ನಡಕ್ಕೆ ರೂಪಾಂತರಿಸಿದವರು :

(A) ಡೆಪ್ಯುಟಿ ಚೆನ್ನಬಸಪ್ಪ (B) ಉತ್ತಂಗಿ ಚೆನ್ನಪ್ಪ

(C) ಬಸವಪ್ಪ ಶಾಸ್ತ್ರೀ (D) ಟಿ.ಎಸ್. ವೆಂಕಣ್ಣಯ್ಯ

13. ಲಿಯೊ ಟಾಲ್‌ಸ್ಟಾಯ್‌ನ 'ವಾರ್ ಎಂಡ್ ಪೀಸ್' ಅನ್ನು ಅನುವಾದ ಮಾಡಿದವರು :

(A) ಲಂಕೇಶ್ (B) ಎಚ್.ಎಲ್. ನಾಗೇಗೌಡ

(C) ಸಿಪಿಕೆ (D) ದೇಜಗೌ

14. ‘ವಾಕ್ಯಂ ರಸಾತ್ಮಕಂ ಕಾವ್ಯಂ ಎಂದು ಹೇಳಿದ ಆಲಂಕಾರಿಕ :

(A) ವಿಶ್ವನಾಥ (B) ವಾಮನ

(C) ಭಾಮಹ (D) ದಂಡಿ

15. ‘ಹೆಳವನ ಹೆಗಲಮೇಲೆ ಕುರುಡ ಕೂತಿದ್ದಾನೆ, ದಾರಿ ಸಾಗುವುದೆಂತೋ ನೋಡಬೇಕು’ – ಇಲ್ಲಿರುವದು :

(A) ದೃಷ್ಟಾಂತ (B) ಪ್ರತಿಮೆ

(C) ಶ್ಲೇಷೆ (D) ದೀಪಕ

16. ‘ಮಹೋನ್ನತಿ’ ತತ್ವವನ್ನು ಪ್ರತಿಪಾದಿಸಿದವನು

(A) ಟಿ.ಎಸ್. ಎಲ್ಯಟ್ (B) ಪ್ಲೇಟೊ

(C) ಅರಿಸ್ಟಾಟಲ್ (D) ಲಾಂಜನಸ್

17. **‘ಏಚಿದಾರ್’** ಈ ಪದವು ಕನ್ನಡಭಾಷೆಯ ಈ ಅವಸ್ಥೆಗೆ ಸೇರುತ್ತದೆ :

(A) ನಡುಗನ್ನಡ (B) ಪೂರ್ವದ ಹಳಗನ್ನಡ

(C) ಹೊಸಗನ್ನಡ (D) ಹಳಗನ್ನಡ

18. **‘ಪೊಗೞೆ ಪೊಟ್ಟರ್’** ಈ ಪ್ರಯೊಗದ ಸ್ವರೂಪ :

(A) ಸಂಭೋಧನೆ (B) ನಿಷೇಧ

(C) ಕರ್ಮಣಿ (D) ಕರ್ತರಿ

19. ‘ಕಾಗದ’ ಈ ಪದವು ಈ ಭಾಷೆಯಿಂದ ಸ್ವೀಕೃತವಾದುದು :

(A) ಇಂಗ್ಲಿಷ್ (B) ಹಿಂದಿ

(C) ಅರೆಬಿಕ್ (D) ಸಂಸ್ಕೃತ

20. 'ತಾನ್' – ಇದು ಯಾವ ಸರ್ವನಾಮಕ್ಕೆ ಉದಾಹರಣೆ ?

(A) ಅಭಿವ್ಯಾಪಕ (B) ವ್ಯಾವರ್ತಕ

(C) ಆತ್ಮಾರ್ಥಕ (D) ನಿರ್ದೇಶಕ

21. ರಾಜಾಶ್ರಯದಲ್ಲಿದ್ದ ಕವಿಗಳು :

(i) ನಯಸೇನ ಮತ್ತು ಸರ್ವಜ್ಞ

(ii) ಚಾವುಂಡರಾಯ ಮತ್ತು ನೇಮಿಚಂದ್ರ

(iii) ರನ್ನ ಮತ್ತು ಜನ್ನ

(iv) ನಯಸೇನ ಮತ್ತು ಪಾಲ್ಕುರಿಕೆ ಸೋಮನಾಥ

ಇವುಗಳಲ್ಲಿ ಸರಿಯಾದ ಉತ್ತರ

(A) (ii) ಮತ್ತು (iii)

(B) (i) ಮತ್ತು (ii)

(C) (ii) ಮತ್ತು (iv)

(D) (iii) ಮತ್ತು (iv)

22. ಇವರು ಪ್ರಗತಿಶೀಲ ಚಳುವಳಿಗೆ ಸೇರಿದವರು :

(i) ಕಟ್ಟೀಮನಿ ಮತ್ತು ಶ್ರೀರಂಗ

(ii) ಅ.ನ.ಕೃ. ಮತ್ತು ನಿರಂಜನ

(iii) ತ.ರಾ.ಸು. ಮತ್ತು ದೇವುಡ

(iv) ಬೆಟಗೇರಿ ಕೃಷ್ಣಶರ್ಮಾ ಮತ್ತು ಚದುರಂಗ

ಇವುಗಳಲ್ಲಿ ಸರಿಯಾದ ಉತ್ತರ :

(A) (ii) ಮತ್ತು (iii)

(B) (iii) ಮತ್ತು (iv)

(C) (i) ಮತ್ತು (ii)

(D) (i) ಮತ್ತು (iii)

23. ಕನ್ನಡದಲ್ಲಿ ಬಳಕೆಯಾಗುವ ಅನ್ಯದೇಶ ಪದಗಳು :

(i) ತರಕಾರಿ

(ii) ಸಾಬೂನು

(iii) ತಿಂಗಳು

(iv) ಬಾನ್

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii)

(B) (iii) ಮತ್ತು (iv)

(C) (i) ಮತ್ತು (iii)

(D) (ii) ಮತ್ತು (iv)

24. ಸ್ತ್ರೀವಾದಿ ಚಿಂತನೆಯನ್ನು ಮಾಡಿದವರು :

(i) ಕೇಟ್ ಮಿಲ್ಲೆಟ್

(ii) ಜಿ.ಎಸ್. ಆಮೂರ

(iii) ವಿಜಯಾ ದಬ್ಬೆ

(iv) ಪಿ. ಲಂಕೇಶ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iv)

(B) (i) ಮತ್ತು (iii)

(C) (ii) ಮತ್ತು (iv)

(D) (ii) ಮತ್ತು (iii)

25. ಇವು ಆಗಮಸಂಧಿಗೆ ಉದಾಹರಣೆಗಳಾಗಿವೆ :

(i) ಗುರೂಪದೇಶ ಮತ್ತು ಅತ್ಯುಕ್ತಿ

(ii) ಮನೆಯನ್ನು ಮತ್ತು ಕುರಿಯಿಂದ

(iii) ಮನ್ವಂತರ ಮತ್ತು ದಿಗಂತ

(iv) ಗುರುವನ್ನು ಮತ್ತು ಮಗುವಿನಲ್ಲಿ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iii)

(B) (ii) ಮತ್ತು (iv)

(C) (ii) ಮತ್ತು (iii)

(D) (iii) ಮತ್ತು (iv)

**26.** ಕಾದಂಬರಿ ಪ್ರಕಾರಕ್ಕೆ ಸೇರಿದ ಕೃತಿಗಳು :

(i) ಕಥೆಯಾದಳು ಹುಡುಗಿ ಮತ್ತು ಶಿಕಾರಿ

(ii) ದ್ಯಾವನೂರು ಮತ್ತು ಸಂಸ್ಕಾರ

(iii) ಭಾರತೀಪುರ ಮತ್ತು ನಾಲ್ಕನೆಯ ಆಯಾಮ

(iv) ಕರ್ವಾಲೊ ಮತ್ತು ಓಂ ಣಮೋ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (ii)

(B) (ii) ಮತ್ತು (iv)

(C) (iii) ಮತ್ತು (iv)

(D) (i) ಮತ್ತು (iv)

**27.** ಆಲಂಕಾರಿಕರು ಹೇಳುವ ಕಾವ್ಯ ಹೇತುಗಳು :

(i) ಪ್ರತಿಭೆ

(ii) ಕಾವ್ಯಪರಿಚಯ

(iii) ತತ್ತ್ವೋಪದೇಶ

(iv) ಧರ್ಮಶ್ರದ್ಧೆ

ಇವುಗಳಲ್ಲಿ ಸರಿಯಾದ ಉತ್ತರ

(A) (i) ಮತ್ತು (iv)

(B) (ii) ಮತ್ತು (iv)

(C) (i) ಮತ್ತು (ii)

(D) (ii) ಮತ್ತು (iii)

**28.** ಅರ್ಥಸಂಕೋಚಕ್ಕೆ ಉದಾಹರಣೆಗಳು :

(i) ಹೊನ್ನು

(ii) ಎಣ್ಣೆ

(iii) ಒಡವೆ

(iv) ಬೃಹಸ್ಪತಿ

ಸರಿಯಾದ ಉತ್ತರ

(A) (i) ಮತ್ತು (iv)

(B) (ii) ಮತ್ತು (iii)

(C) (iii) ಮತ್ತು (iv)

(D) (i) ಮತ್ತು (iii)

29. ಇವರು ಕನ್ನಡ ವಿಮರ್ಶೆಯಲ್ಲಿ ಮುಖ್ಯರು :

(i) ಕೀರ್ತಿನಾಥ ಕುರ್ತಕೋಟಿ

(ii) ಎಂ.ಚಿದಾನಂದ ಮೂರ್ತಿ

(iii) ಜಿ.ಎಚ್.ನಾಯಕ

(iv) ಟಿ.ವಿ.ವೆಂಕಟಾಚಲಶಾಸ್ತ್ರಿ

ಸರಿಯಾದ ಉತ್ತರ

(A) (i) ಮತ್ತು (iv)

(B) (i) ಮತ್ತು (iii)

(C) (ii) ಮತ್ತು (iv)

(D) (ii) ಮತ್ತು (iii)

30. ಇವು ನಾಮವಿಭಕ್ತಿ ಪ್ರತ್ಯಯಗಳು :

(i) ಇಂದ

(ii) ತನ

(iii) ಅಲ್ಲಿ

(iv) ಉದು

ಸರಿಯಾದ ಉತ್ತರ

(A) (i) ಮತ್ತು (ii)

(B) (i) ಮತ್ತು (iii)

(C) (iii) ಮತ್ತು (iv)

(D) (ii) ಮತ್ತು (iv)

## ಲೇಖನ ಭಾಗ ಆಧಾರಿತ ಆಯ್ಕೆಯ ಮಾದರಿ

**ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳಗಳಲ್ಲಿ ಗುರುತಿಸಿರಿ.**

ಪುಟ್ಟಪ್ಪನವರು ಯುವಜನರನ್ನು ಕುರಿತು ಹೇಳುವ ಮಾತುಗಳು ಗಮನಾರ್ಹವಾಗಿವೆ : " ಯುವಜನರು ಮೊದಲು ಸ್ವತಂತ್ರವಾಗಿ ಆಲೋಚಿಸುವುದನ್ನು ರೂಢಿಸಿಕೊಂಡು ವಿಚಾರವಂತರಾಗಬೇಕು. ಅರ್ಥವಿಲ್ಲದ ಸಾಂಪ್ರದಾಯಿಕ ಮತೀಯ ಹಾಗೂ ಸಾಮಾಜಿಕ ಪದ್ಧತಿಗಳನ್ನು ಅಜ್ಞಾನ ಮತ್ತು ಅವಿದ್ಯಾಜನ್ಯವಾದ ಮೌಢ್ಯತೆಯನ್ನೂ ಮೂಢನಂಬಿಕೆಗಳನ್ನೂ ನಿಷ್ಠುರವಾಗಿ ತೊಡೆದುಹಾಕಿ ವೈಚಾರಿಕ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ದೈವ ಶ್ರದ್ಧೆ, ಆತ್ಮ ಶ್ರದ್ಧೆ ಮತ್ತು ವಿಶಾಲ ಹೃದಯದ ಮಾನವೀಯ ಅಂತಃಕರಣ – ಈ ಮೂರನ್ನೂ

ಬಲಪಡಿಸಿಕೊಂಡು ಜೀವನದಲ್ಲಿ ಉದಾತ್ತವೂ ಉನ್ನತವೂ ಆದ ಗುರಿಯನ್ನಿರಿಸಿಕೊಂಡು ಅದರ ಸಾಧನೆಯಲ್ಲಿ ಸತತವಾಗಿ ನಿರತರಾಗಬೇಕು''.

"ನಾನಿಲ್ಲಿ ಗುರುಸ್ಥಾನದಲ್ಲಿ ನಿಂತಿಲ್ಲ, ನೀವೂ ಶಿಷ್ಯಸ್ಥಾನದಲ್ಲಿ ಕುಳಿತಿಲ್ಲ, ಇದು ಉಪದೇಶವಲ್ಲ; ವಿಜ್ಞಾಪನೆ; ಆವೇಶದಿಂದ ಆಡಿದುದಲ್ಲ, ಆಕ್ರೋಶದಿಂದಲೂ ಆಡಿದುದಲ್ಲ, ದೀರ್ಘಚಿಂತನೆ, ಜಿಜ್ಞಾಸೆಗಳಿಂದ ಪ್ರಶಾಂತಮನದಲ್ಲಿ ಮಂಥನ ಮೂಡಿದ ಬಳಿಕ

ರೂಪ ತಳೆದ ರಚನಾತ್ಮಕ ವಿಚಾರಗಳು. ಇವುಗಳನ್ನು ಕುರುಡಾಗಿ ಸ್ವೀಕರಿಸದೆ ಮತಿಯ ಒರೆಗಲ್ಲಿಗೆ ಹಚ್ಚಿ, ಪರೀಕ್ಷಿಸಿ, ಸರಿಯೆನಿಸಿದರೆ ಮಾತ್ರ ಅನುಮೋದಿಸಿರಿ. ಶ್ರೀರಾಮಕೃಷ್ಣ ಪರಮಹಂಸರನ್ನು ಕೂಡ ಯುವಕ ನರೇಂದ್ರ (ಸ್ವಾಮಿ ವಿವೇಕಾನಂದ) ಪರೀಕ್ಷೆ ಮಾಡಿಯೆ ಗುರುವೆಂದು ಒಪ್ಪಿಕೊಂಡಿದ್ದು," ಎಂದು ಹೇಳುತ್ತಾ ''ಪಕ್ಷಪಾತವಿಲ್ಲದೆ ಕಿವಿಗೊಟ್ಟು ಕೇಳಿರಿ," ಎಂದು ಅವರು ವಿನಂತಿಸುತ್ತಾರೆ. ಪೂರ್ವಗ್ರಹಪೀಡಿತರಾಗದೆ ಗಮನವಿಟ್ಟು ಕೇಳುವುದು, ಅನಂತರ ಆ ಬಗ್ಗೆ ಪರಾಮರ್ಶೆ ಮಾಡುವುದು ಅವರ ಪ್ರಕಾರ ವೈಚಾರಿಕತೆಯ ಮೊದಲ ಸೂತ್ರ.

'ನಿರಂಕುಶ ಮತಿ' ಎಂಬ ಪದಪುಂಜ ಪುಟ್ಟಪ್ಪನವರೆ ನಾಣ್ಯೈಸಿದುದು. ಅದರ ಅರ್ಥವನ್ನು ಅವರೆ ಬಿಡಿಸಿ ಹೇಳುತ್ತಾರೆ. ನಿರಂಕುಶ 'ಮನ' ಅಲ್ಲ . ನಿರಂಕುಶ 'ಮತಿ'. ಮನ ಎಂದಾಗಿದ್ದರೆ ಸ್ವೇಚ್ಛಾಚಾರ ಎಂಬ ಅರ್ಥ ಬರುತ್ತಿತ್ತು. 'ಮತಿ' ಎಂದರೆ ಬುದ್ಧಿ, ವಿಚಾರಶಕ್ತಿ. ಮನುಷ್ಯನಿಗೆ ಮಾತ್ರ ನಿಸರ್ಗವಿತ್ತಿರುವ ವರ. ಸರ್ವೋತ್ಕೃಷ್ಟವಾದ ಆಯುಧ. ಬಾಳಿನ ಕತ್ತಲಿನಲ್ಲಿ ದಾರಿ ತೋರುವ ಕೈದೀವಿಗೆ. ಮನುಷ್ಯತ್ವದಿಂದ ದೈವತ್ವಕ್ಕೇರಲು ಸಹಾಯಕವಾದ ಸಾಧನೋಪಕರಣ. ಮತಿ ಮನುಷ್ಯರೆಲ್ಲರಲ್ಲಿಯೂ ಇದೆ, ಸ್ವಲ್ಪವಾಗಿಯೊ ಹೆಚ್ಚಾಗಿಯೊ. ಆದರೆ ಇಂಥಾ ಮತಿಯ ಗತಿ ಏನಾಗಿದೆ? ಬಳಸದೆ ತುಕ್ಕು ಹಿಡಿದಿದೆ. ಮೌಢ್ಯ – ಮೂಢನಂಬಿಕೆಗಳಿಗೆ ಬಲಿಯಾಗಿ ಕಂದಾಚಾರಗಳ ದಾಸ್ಯದಲ್ಲಿದ್ದು ದೀನವಾಗಿದೆ. ಕ್ಷುದ್ರದೇವತೆಗಳ ಭಯ, ಕಾಲ್ಪನಿಕ ಸ್ವರ್ಗ – ನರಕಗಳ ಭಯಗಳಿಂದ ಸತ್ವರಹಿತವಾಗಿದೆ. ಯುವಜನರು ಅಜ್ಞಾನ, ಭಯಗಳಿಂದ ತಮ್ಮ ಮತಿಯನ್ನು ಮುಕ್ತಗೊಳಿಸಿಕೊಂಡು, ಸ್ವತಂತ್ರವಾದ ಆಲೋಚನೆ, ಅಧ್ಯಯನ, ಚಿಂತನೆ, ಚರ್ಚೆ ಇತ್ಯಾದಿ ಸಾಧನೆಗಳಿಂದ ಹರಿತಗೊಳಿಸಿಕೊಳ್ಳಬೇಕು. ಇದುವರೆಗೆ ಇದು ಆಗಿಲ್ಲವಾದರೆ ಈ ಕ್ಷಣದಿಂದಲೆ ದೃಢಸಂಕಲ್ಪ ಮಾಡಿ ಹೊಳಪುಗೊಳಿಸುವ, ಹರಿತಗೊಳಿಸುವ ಸಾಧನೆಯಲ್ಲಿ ತೊಡಗಬೇಕು.

ಮತಿಯನ್ನು ದಾಸ್ಯ, ನಿರ್ಬಂಧಗಳಲ್ಲಿಟ್ಟು ಕುಗ್ಗಿಸಿರುವ ಅಂಶಗಳು ಯಾವುವು? ಜಾತೀಯತೆ, ಮತೀಯ ಸಂಕುಚಿತ ದೃಷ್ಟಿ. ಒಂದು ಕಡೆ ಅವಿದ್ಯಾವಂತ ಗ್ರಾಮೀಣ ಜನ ಮತಿಹೀನರಾಗಿ ನಾನಾ ಕ್ಷುದ್ರ ದೇವತೆಗಳ ಇಲ್ಲವೆ ಭೂತ-ಪ್ರೇತ-ಪಿಶಾಚಿಗಳ ಭಯ ಪೂಜೆಗಳಲ್ಲಿ ಮುಳುಗಿ, ಮೂಢನಂಬಿಕೆಗಳನ್ನು ಬೆಳೆಸಿಕೊಂಡು, ಧರ್ಮದ ಸೋಗಿನಲ್ಲಿ ನಡೆಯುವ ಶೋಷಣೆಗಳಿಗೆ ಒಳಗಾಗಿದ್ದಾರೆ. ಗೊಡ್ಡು ಧಾರ್ಮಿಕ ಸಾಮಾಜಿಕ ಸಂಪ್ರದಾಯ, ಕಟ್ಟುಕಟ್ಟಳೆಗಳು, ಅರ್ಥಹೀನ ಧಾರ್ಮಿಕ ಬಾಹ್ಯಾಚರಣೆಗಳು, ಜಾತೀಯ ವಿಶಿಷ್ಟ ಲಾಂಛನಗಳು ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯ, ಮಡಿ-ಮೈಲಿಗೆ, ಭೋಜನ ನಿರ್ಬಂಧಗಳು ಇತ್ಯಾದಿಗಳೆ ಮತಧರ್ಮಗಳೆನಿಸಿಕೊಂಡಿವೆ. ಕೆಲಸಕ್ಕೆ ಬಾರದ, ಸಮಷ್ಟಿಹಿತಕ್ಕೆ ಶ್ರೇಯಸ್ಕರವಲ್ಲದ ನೂರಾರು ಆಚಾರ-ವ್ಯವಹಾರಗಳು ಮತದ ಉರುಗಳಾಗಿವೆ. ಗೀತೆ-ಉಪನಿಷತ್ತುಗಳು, ಸಂತರು-ಜ್ಞಾನಿಗಳು ತಮ್ಮ ಸ್ವಾನುಭವ, ಸತ್ಯದರ್ಶನಗಳಿಂದ ನೀಡಿದ ದಿವ್ಯಸಂದೇಶಗಳು, ಸಮಸ್ತ ಜೀವರ ಹಿತದ ಉದಾತ್ತ ತತ್ತ್ವಗಳು ಮೂಲೆಗುಂಪಾಗಿವೆ ಎಂದು ತಮ್ಮ ಸುತ್ತಮುತ್ತಣ ಪರಿಸ್ಥಿತಿಯನ್ನು ಕಂಡು ತರುಣಕವಿ ಪುಟ್ಟಪ್ಪನವರು ಅತೀವ ವ್ಯಥೆಯಿಂದ ಹೇಳುತ್ತಾರೆ. ಅವರ ನೋವನ್ನು ಸಾಮಾಜಿಕ ಕಳಕಳಿಯನ್ನು ಅರ್ಥ ಮಾಡಿಕೊಳ್ಳಬೇಕು. ''ಅಮೃತಪುತ್ರರಾದ ನಾವೆಲ್ಲರು ಆ ಅಮೃತವಾಣಿಗೆ ಕಿವಿಗೊಟ್ಟು ಸನ್ಮತಿಗಳಾಗಬೇಕು.''

ವೇದ ಎಂದರೆ ತಿಳಿದುದು ಎಂದರ್ಥ. ವಿಚಾರದ ಬೆಳಕಿನಲ್ಲಿ ವಿಜ್ಞಾನದ ಪ್ರಯೋಗಗಳಿಂದ ಸಿದ್ಧವಾಗಿ ತಿಳಿದ ಸತ್ಯವೂ ವೇದವೆ. ವೇದಗಳು, ಋಷಿಗಳು ಎಂದರೆ ಯಾವುದೊ ಪುರಾತನ ಕಾಲದಲ್ಲಿ ಆಗಿಹೋದ ಸಂಗತಿ ಎಂದು ತಿಳಿಯಬಾರದು.ಇಂದಿಗೂ ಇರುವ ಮತ್ತು ಬರುತ್ತಲೇ ಇರುವ ಘಟನೆಗಳು. ಕಾಲಕಾಲಕ್ಕೆ ಬರುವ ಹೊಸ ಋಷಿಗಳ ಹೊಸ ವೇದಗಳಿಗೂ ಮನ ತೆರೆದಿರಬೇಕು. ಯುವಜನರ ಮತಿ ಕೊಳೆ –ಪಾಚಿ ತುಂಬಲನುಕೂಲವಾದ ನಿಂತ ನೀರಾಗಬಾರದು. ನಿತ್ಯವು ಹರಿಯುವ ನಿರ್ಮಲವಾದ ಹೊಳೆ ಆಗಬೇಕು.

ಜೊತೆಗೆ ಸರಿ ಯಾವುದು, ತಪ್ಪು ಯಾವುದು ಎಂಬ ಸಾರಾ ಸಾರ ಜ್ಞಾನ ಮತ್ತು ವಿವೇಕ ಇರಬೇಕು. ಮತದ ಬಗ್ಗೆ ಧರ್ಮದ ಬಗ್ಗೆ ಭ್ರಮೆಗಳಿರಬಾರದು, ತಪ್ಪುಗ್ರಹಿಕೆಗಳೂ ಇರಬಾರದು ಹಳ್ಳಿಯಾಗಲಿ ನಗರವಾಗಲಿ ಅಲ್ಲಿನ ಪ್ರತಿಯೊಬ್ಬರೂ, ಅದರಲ್ಲೂ ಯುವಜನರು, ನಿತ್ಯವೂ ಒಳ್ಳೆಯ ಪುಸ್ತಕ, ಒಳ್ಳೆಯ ಪತ್ರಿಕೆಗಳನ್ನು ಓದಿ ತಿಳಿವಳಿಕೆಯನ್ನು ವಿಸ್ತರಿಸಿಕೊಳ್ಳುತ್ತಿರಬೇಕು. ಆದರೆ ಪುಸ್ತಕಗಳಲ್ಲಿ ಅಚ್ಚಾಗಿದೆ, ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಎಂದ ಮಾತ್ರಕ್ಕೆ ಖಂಡಿತವಾಗಿಯೂ ಸತ್ಯ ಎಂದು ತಿಳಿಯಬಾರದು. ಅವುಗಳ ಸತ್ಯಾಸತ್ಯತೆಯನ್ನು ಸಾಧಾರವಾಗಿದೆಯೇ ಎಂದು ಪರಾಮರ್ಶಿಸಬೇಕು .

ಧರ್ಮದ ನಿಜವಾದ ಗುರಿ ಸತ್ಯಸಾಕ್ಷಾತ್ಕಾರ. ಅದು ಪರಮಾನಂದವನ್ನೂ ಪರಮಶಾಂತಿಯನ್ನೂ ನೀಡುತ್ತದೆ. ವ್ಯಕ್ತಿಯ ಆತ್ಮೋದ್ಧಾರ–ಸಮಷ್ಟಿಯ ಹಿತ ಎರಡನ್ನೂ ಸಾಧಿಸಬೇಕು. ಇದೆ ಸ್ವಾಮಿ ವಿವೇಕಾನಂದರು ನೀಡಿದ ದಿವ್ಯಮಂತ್ರ. ಇದು ನಮ್ಮ ಯುವಜನರ ಜೀವನದ ಗುರಿ ಆಗಬೇಕು. ಸಾಮೂಹಿಕ ಪ್ರಾರ್ಥನೆಯಲ್ಲಿ ಅಗಾಧವಾದ ಶಕ್ತಿಯಿದೆ ನಿಜ. ಆದರೆ ಯಜ್ಞ–ಯಾಗ–ಪ್ರಾಣಿಬಲಿಗಳಿಂದ ಮಳೆ ಬರಿಸಲು, ಸಾಂಕ್ರಾಮಿಕ ರೋಗಗಳನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಉದ್ದೇಶ ಒಳ್ಳೆಯದಿರಬಹುದು. ಆದರೆ ಈ ಧಾರ್ಮಿಕ ಕಾರ್ಯಗಳು ಜನಸಾಮನ್ಯರ ಮೌಢ್ಯದ ದುರುಪಯೋಗ ಮಾಡಿಕೊಳ್ಳುವ,ಶೋ಼ಷಣೆ ಮಾಡುವ ತಂತ್ರಗಳಾದಾಗ ಅದರ ಹಿಂದಿನ ದುಷ್ಟಮನಸ್ಸಿನ ಬಗ್ಗೆ ಎಚ್ಚರಿಕೆಯಿಂದಿರಬೇಕು. ಹೀಗೆ ಹರಿಯುತ್ತದೆ ಈ ಪ್ರಾಜ್ಞ ತರುಣಕವಿಯ ವಿಚಾರಧಾರೆ.

**31.** ಈ ಲೇಖನ ಭಾಗಕ್ಕೆ ನೀಡಬಹುದಾದ ಶೀರ್ಷಿಕೆ :

(A) ವೇದಗಳ ಮಹತ್ವ
(B) ವೈಚಾರಿಕತೆಯ ಮಹತ್ವ
(C) ಸಹಕಾರ ಮನೋಧರ್ಮ
(D) ಸಂಪ್ರದಾಯಗಳು

**32.** 'ನಿರಂಕುಶ ಮತಿ' ಎಂದರೆ :

(A) ಪ್ರಾಚೀನ ನಂಬಿಕೆಗಳನ್ನು ಉಳಿಸಿಕೊಳ್ಳುವುದು

(B) ಸ್ವತಂತ್ರ ವಿಚಾರಶಕ್ತಿಯನ್ನು ಹೊಂದುವುದು

(C) ಸ್ವೇಚ್ಛಾಚಾರ

(D) ಅಂಕೆಯಿಲ್ಲದೆ ವಿಚಾರಮಾಡುವುದು

33. ಓದಿನ ತಿಳುವಳಿಕೆಯನ್ನು ವಿಸ್ತರಿಸಿಕೊಳ್ಳಲು :

(A) ಅಚ್ಚಾಗಿ ಬಂದಿರುವುದನ್ನೆಲ್ಲ ಸತ್ಯವೆಂದು ತಿಳಿಯುವುದು

(B) ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಳ್ಳುವುದು

(C) ಮತಧರ್ಮಗಳ ಬಗ್ಗೆ ಮನನ ಮಾಡುವುದು

(D) ಸತತವಾದ ಓದು ಮತ್ತು ಪರಾಮರ್ಶನ

34. ಲೇಖಕರ ಪ್ರಕಾರ ಯುವಕರ ಬಾಳಿನ ಗುರಿ :

(A) ಸಮಷ್ಟಿಯ ಹಿತಸಾಧನೆ

(B) ಹೋರಾಟದ ಮನೋಧರ್ಮವನ್ನು ಬೆಳೆಸಿಕೊಳ್ಳುವುದು

(C) ವ್ಯಕ್ತಿಯ ಆತ್ಮೋದ್ಧಾರ

(D) ಹೊಸ ಹೊಸ ಪುಸ್ತಕಗಳನ್ನು ಓದುವುದು

35. ಸಾರಾಸಾರ ಜ್ಞಾನ ಮತ್ತು ವಿವೇಕ ಎಂದರೆ :

(A) ತಪ್ಪುಗಳನ್ನು ಸರಿಯೆಂದು ವಾದಿಸುವುದು

(B) ಸರಿಯಾವುದು ತಪ್ಪು ಯಾವುದು ಎಂಬುದನ್ನು ನಿರ್ಧರಿಸುವುದು

(C) ಭ್ರಮೆಯನ್ನು ಸತ್ಯವೆಂದೇ ತಿಳಿಯುವುದು

(D) ಸತ್ಯಾಸತ್ಯತೆಗೆ ಆಧಾರವನ್ನು ತಿಳಿಯದಿರುವುದು

**ಹೇಳಿಕೆ-ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ :**

36. **ಹೇಳಿಕೆ** : 'ಮಾತೆಂಬುದು ಜ್ಯೋತಿರ್ಲಿಂಗ'

**ವಿವರಣೆ** : ಮಾತು ಬೆಂಕಿಯಂತೆ ಪ್ರಕಾಶಮಾನ ವಾಗಿರಬೇಕು

(A) **ಹೇಳಿಕೆ** ಸರಿ **ವಿವರಣೆ** ತಪ್ಪು

(B) **ಹೇಳಿಕೆ** ಸರಿ **ವಿವರಣೆ** ಸರಿ

(C) **ಹೇಳಿಕೆ** ತಪ್ಪು **ವಿವರಣೆ** ತಪ್ಪು

(D) **ಹೇಳಿಕೆ** ತಪ್ಪು **ವಿವರಣೆ** ಸರಿ

37. **ಹೇಳಿಕೆ :** ಇದುವೆ ಮಹಾಭಾರತಕ್ಕಾದಿಯಾಯ್ತು ಅಬ್ಜದಾಳಕ್ಷೀ ಪೇಟಿ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶ ಪ್ರಪಂಚಂ

**ವಿವರಣೆ :** ನಿನ್ನ ಕೂದಲೆಂಬ ಕುಣಿಕೆಯ ಪ್ರಪಂಚವು ಮಹಾಭಾರತಕ್ಕೆ ನಾಂದಿಯಾಯಿತು ಇದನ್ನು ಕೇವಲ ಸಾಮಾನ್ಯವಾದ ಕೂದಲೆನ್ನಬಹುದೆ ?

(A) **ಹೇಳಿಕೆ** ಸರಿ ಮತ್ತು **ವಿವರಣೆ** ತಪ್ಪು

(B) **ಹೇಳಿಕೆ** ಸರಿ ಮತ್ತು **ವಿವರಣೆ** ಸರಿ

(C) **ಹೇಳಿಕೆ** ಸರಿ ಮತ್ತು **ವಿವರಣೆ** ಸರಿ

(D) **ಹೇಳಿಕೆ** ತಪ್ಪು ಮತ್ತು **ವಿವರಣೆ** ತಪ್ಪು

38. **ಹೇಳಿಕೆ** : 'ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ'

**ವಿವರಣೆ** : ಬ್ರಹ್ಮಚಾರಿಯಾದವನು ಉಪವಾಸಿಯಾಗಿರುತ್ತಾನೆ

(A) **ಹೇಳಿಕೆ** ಸರಿ ಮತ್ತು **ವಿವರಣೆ** ಸರಿ

(B) **ಹೇಳಿಕೆ** ತಪ್ಪು ಮತ್ತು **ವಿವರಣೆ** ತಪ್ಪು

(C) **ಹೇಳಿಕೆ** ತಪ್ಪು ಮತ್ತು **ವಿವರಣೆ** ಸರಿ

(D) **ಹೇಳಿಕೆ** ಸರಿ ಮತ್ತು **ವಿವರಣೆ** ತಪ್ಪು

39. **ಹೇಳಿಕೆ** : ಕರಿಘನ, ಅಂಕುಶ ಹಿರಿದೆನ್ನ ಬಹುದೆ ?

ತಮಂಧ ಘನ, ಜ್ಯೋತಿ ಹಿರಿದೆನ್ನಬಹುದೆ ?

**ವಿಚರಣೆ** : ಆನೆ ದೊಡ್ಡದಾದರೂ ಅಂಕುಶವೂ ಕಿರಿದಲ್ಲ

ಕಡುಗತ್ತಲೆ ದಟ್ಟವಾದರೂ ಬೆಳಕು ಕಿರಿದಲ್ಲ

(A) **ಹೇಳಿಕೆ** ಸರಿ ಮತ್ತು **ವಿವರಣೆ** ಸರಿ

(B) **ಹೇಳಿಕೆ** ಸರಿ ಮತ್ತು **ವಿವರಣೆ** ತಪ್ಪು

(C) **ಹೇಳಿಕೆ** ತಪ್ಪು ಮತ್ತು **ವಿವರಣೆ** ತಪ್ಪು

(D) **ಹೇಳಿಕೆ** ತಪ್ಪು ಮತ್ತು **ವಿವರಣೆ** ಸರಿ

40. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಅನಂತಮೂರ್ತಿ – ದಿವ್ಯ

(B) ಕುಂವೀ – ಭವ

(C) ಯಶವಂತ ಚಿತ್ತಾಲ – ವಿಕ್ಷೇಪ

(D) ದೇವನೂರ ಮಹಾದೇವ – ಗ್ರಾಮಾಯಣ

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ನಾಕುತಂತಿ - ಪು.ತಿ.ನ.

(B) ಪ್ರೇಮಕಾಶ್ಮೀರ – ಕುವೆಂಪು

(C) ನಲ್ಮೆ – ಸೇಡಿಯಾಪು ಕೃಷ್ಣಭಟ್ಟ

(D) ಒಲುಮೆ – ಜಿ .ಪಿ. ರಾಜರತ್ನಂ

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದುವುದಿಲ್ಲ ?

(A) ಆನಂದ ವರ್ಧನ – ಧ್ವನ್ಯಾಲೋಕ

(B) ಜಗನ್ನಾಥ ಪಂಡಿತ – ರಸಗಂಗಾಧರ

(C) ಮಮ್ಮಟ – ಕಾವ್ಯಪ್ರಕಾಶ

(D) ವಾಮನ – ಕಾವ್ಯಾದರ್ಶ

43. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ

(A) ವ್ಯಕ್ತಿತ್ವ ನಿರಸನ – ಎಡ್ವರ್ಡ ಬುಲ್ಲೊ

(B) ಅನುಕರಣ – ಅರಿಸ್ಟಾಟಲ್

(C) ಭವ್ಯತೆ – ಕ್ರೋಚೆ

(D) ಕೆಥಾರ್ಸಿಸ್ – ಮಾಥ್ಯೂಅರ್ನಾಲ್ಡ್

44. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಕವಿಯಿಂದ – ದ್ವಿತೀಯಾ

(B) ಕವಿಯ – ಷಷ್ಟೀ

(C) ಕವಿಯಲ್ಲಿ – ಚತುರ್ಥೀ

(D) ಕವಿಗೆ – ತೃತೀಯಾ

<u>ಬಹು ಆಯ್ಕೆಯ ಜೋಡಣೆ</u>

45.

| | | | |
|---|---|---|---|
| (a) | ನಾಗವರ್ಮ 1 | (i) | ಸುಕುಮಾರಚರಿತ |
| (b) | ನಾಗಚಂದ್ರ | (ii) | ಧರ್ಮಾಮೃತ |
| (c) | ನಾಗವರ್ಮ 2 | (iii) | ಛಂದೋಂಬುಧಿ |
| (d) | ಶಾಂತಿನಾಥ | (iv) | ಮಲ್ಲಿನಾಥ ಪುರಾಣ |
| | | (v) | ಕರ್ಣಾಟಕ ಭಾಷಾಭೂಷಣ |

| | *(a)* | *(b)* | *(c)* | *(d)* |
|---|---|---|---|---|
| (A) | (ii) | (iii) | (i) | (iv) |
| (B) | (i) | (iii) | (iv) | (ii) |
| (C) | (iii) | (iv) | (v) | (i) |
| (D) | (iii) | (v) | (i) | (iv) |

46. (a) ಮಾಸ್ತಿ (i) ಕ್ಷಿತಿಜ

(b) ಶಾಂತಿನಾಥ ದೇಸಾಯಿ (ii) ಅಕ್ಕ

(c) ಸೇಡಿಯಾಪು (iii) ಉಮಾಪತಿಯ ಸ್ಕಾಲರ್‌ಶೀಪ್

(d) ವೈದೇಹಿ (iv) ನಾಗರ ಬೆತ್ತ

(v) ಡುಬಾಯಿ ಪಾದ್ರಿಯ ಪಾತ್ರ

| | (a) | (b) | (c) | (d) |
|---|---|---|---|---|
| (A) | (v) | (iv) | (ii) | (iii) |
| (B) | (v) | (i) | (iv) | (ii) |
| (C) | (iv) | (ii) | (iii) | (i) |
| (D) | (iii) | (v) | (ii) | (i) |

47. (a) ರೇಮಂಡ್ ವಿಲಿಯಂಸ್ (i) ಓರಿಯಂಟಲಿಸಂ

(b) ಎಡ್ವರ್ಡ ಸಯೀದ್ (ii) ಕಾಮನ್ ಪರ್‌ಸೂಟ್

(c) ಟಿ.ಎಸ್.ಎಲ್ಯಟ್ (iii) ಕೀವರ್ಡ್ಸ

(d) ಎಫ್.ಆರ್.ಲೀವಿಸ್ (iv) ಸೆಲೆಕ್ಟೆಡ್ ಎಸ್ಸೇಸ್

(v) ಥಿಯರಿ ಆಫ್ ಲಿಟರೇಚರ್

| | (a) | (b) | (c) | (d) |
|---|---|---|---|---|
| (A) | (ii) | (iv) | (v) | (iii) |
| (B) | (iii) | (v) | (iv) | (i) |
| (C) | (iii) | (i) | (iv) | (ii) |
| (D) | (iv) | (v) | (ii) | (iii) |

**ಅನುಕ್ರಮ ಮಾದರಿ**

**ಈ ಕೆಳಗಿನ ಕಾಲಾನುಕ್ರಮ ಸರಣಿಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ.**

48. (A) ವಿಗಡವಿಕ್ರಮರಾಯ, ಕರ್ಣಾಟಕ ಕವಿಚರಿತೆ, ಶನಿಸಂತಾನ, ಕರ್ವಾಲೊ

(B) ಕರ್ಣಾಟಕ ಕವಿಚರಿತೆ, ವಿಗಡವಿಕ್ರಮರಾಯ, ಶನಿಸಂತಾನ, ಕರ್ವಾಲೊ

(C) ವಿಗಡವಿಕ್ರಮರಾಯ, ಶನಿಸಂತಾನ, ಕರ್ಣಾಟಕ ಕವಿಚರಿತೆ, ಕರ್ವಾಲೊ

(D) ಶನಿಸಂತಾನ, ಕರ್ಣಾಟಕಕವಿಚರಿತೆ, ಕರ್ವಾಲೊ, ವಿಗಡವಿಕ್ರಮರಾಯ

49. (A) ಭೀಮಕವಿ, ಲಕ್ಕಣ ದಂಡೇಶ, ಲಕ್ಷ್ಮೀಶ, ಷಡಕ್ಷರಿ

(B) ಲಕ್ಕಣದಂಡೇಶ, ಲಕ್ಷ್ಮೀಶ , ಷಡಕ್ಷರಿ, ಭೀಮಕವಿ

(C) ಲಕ್ಷ್ಮೀಶ, ಷಡಕ್ಷರಿ, ಭೀಮಕವಿ, ಲಕ್ಕಣದಂಡೇಶ

(D) ಷಡಕ್ಷರಿ, ಲಕ್ಷ್ಮೀಶ, ಭೀಮಕವಿ, ಲಕ್ಕಣದಂಡೇಶ

50. (A) ಪಿ.ಲಂಕೇಶ, ರಾಮಚಂದ್ರಶರ್ಮಾ, ಶಂಬಾಜೋಶಿ, ಬಿ.ಎಂ.ಶ್ರೀ

(B) ಬಿ.ಎಂ.ಶ್ರೀ, ಶಂಬಾಜೋಶಿ, ರಾಮಚಂದ್ರ ಶರ್ಮಾ, ಪಿ.ಲಂಕೇಶ್

(C) ಬಿ.ಎಂ.ಶ್ರೀ. ರಾಮಚಂದ್ರಶರ್ಮಾ, ಪಿ. ಲಂಕೇಶ್, ಶಂಬಾಜೋಶಿ

(D) ಶಂಬಾಜೋಶಿ, ರಾಮಚಂದ್ರ ಶರ್ಮಾ, ಪಿ.ಲಂಕೇಶ್, ಬಿ.ಎಂ.ಶ್ರೀ

- o O o -

**Space For Rough Work**